## ನಿಮ್ಮೊಡನೆ

# ಜವಾನರ ಹುದ್ದೆಗೂ ಪಿಎಚ್‌ಡಿ!

*ಜವಾನರ ಹುದ್ದೆಗೂ ಸ್ನಾತಕೋತ್ತರ ಪದವೀಧರರು ಲಗ್ಗೆ ಹಾಕುವುದಾದರೆ, ಬರೀ ಎಸ್ಸೆಸೆಲ್ಸಿ ಪಾಸಾಗುವಷ್ಟು ಬುದ್ಧಿಸಾಮರ್ಥ್ಯ ಹೊಂದಿರುವ ಅಭ್ಯರ್ಥಿಗಳು ಎಲ್ಲಿಗೆ ಹೋಗಬೇಕು?*

‘ಕೆಲಸದಲ್ಲಿ ಮೇಲು– ಕೀಳು ಎನ್ನುವುದಿಲ್ಲ, ಎಲ್ಲ ಕೆಲಸಗಳಿಗೂ ಅದರದ್ದೇ ಆದ ಘನತೆ ಗೌರವಗಳಿವೆ’ ಎನ್ನುವುದು ಪ್ರಾಜ್ಞರ, ಜ್ಞಾನಿಗಳ ಮಾತು. ಕಚೇರಿಯೊಂದರಲ್ಲಿ ಜವಾನನ ಕೆಲಸ ಮಾಡುವವನಿಗೂ ಅವನದ್ದೇ ಆದ ಗೌರವವಿದೆ ಎನ್ನುವುದು ನಿಜ. ಆದರೆ ಕಳೆದ ವಾರ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಯೊಂದು, ಸರ್ಕಾರಿ ಕಚೇರಿಯಲ್ಲಿ ಜವಾನರ ಕೆಲಸಕ್ಕೂ ಇರುವ ನೂಕು ನುಗ್ಗಲಿನ ಬಗ್ಗೆ ಗಂಭೀರ ಚಿಂತನೆಗೆ ದಾರಿ ಮಾಡಿಕೊಟ್ಟಿದೆ. ಉತ್ತರ ಪ್ರದೇಶದ ವಿಧಾನಸಭಾ ಸಚಿವಾಲಯದಲ್ಲಿ 368 ಜವಾನರ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದ್ದು, 23 ಲಕ್ಷ ಜನರು ಅರ್ಜಿ ಸಲ್ಲಿಸಿದ್ದಾರೆ ಎನ್ನುವುದೇ ಆ ಸುದ್ದಿ. ಉತ್ತರ ಪ್ರದೇಶದಲ್ಲಿ ನಿರುದ್ಯೋಗದ ಸಮಸ್ಯೆ ಎಷ್ಟೊಂದು ಭೀಕರವಾಗಿದೆ ಎನ್ನುವುದಕ್ಕೆ ಈ ಸುದ್ದಿ ಸಾಕ್ಷಿಯಾಗಬಹುದು. ಅರ್ಜಿ ಸಲ್ಲಿಸಿದವರಲ್ಲಿ ಎಲ್ಲರೂ ನಿರುದ್ಯೋಗಿಗಳಲ್ಲ; ಸಣ್ಣ–ಪುಟ್ಟ ಖಾಸಗಿ ಕೆಲಸದಲ್ಲಿ ಇರುವವರೂ ಸಾಕಷ್ಟು ಜನರು ಇದ್ದೇ ಇರುತ್ತಾರೆ. ಆದರೆ ಹೀಗೆ ಅರ್ಜಿ ಸಲ್ಲಿಸಿದವರಲ್ಲಿ ಸುಮಾರು 2 ಲಕ್ಷ ಜನರು ಬಿಟೆಕ್, ಎಂಎಸ್ಸಿ, ಬಿಎಸ್ಸಿ ಪದವೀಧರರು ಎನ್ನುವುದು ವಿಶೇಷ. ಮಾತ್ರವಲ್ಲ, 255 ಅಭ್ಯರ್ಥಿಗಳು ಪಿಎಚ್‌ಡಿ ಪಡೆದವರು ಎನ್ನುವುದು ಇನ್ನೂ ವಿಶೇಷ!


ಇಷ್ಟೊಂದು ಉನ್ನತ ವಿದ್ಯಾಭ್ಯಾಸ ಪಡೆದವರೂ ಸರ್ಕಾರಿ ಕಚೇರಿಯಲ್ಲಿ ಜವಾನರ ಹುದ್ದೆಯನ್ನು ಏಕೆ ಬಯಸುತ್ತಿದ್ದಾರೆ? ಸರ್ಕಾರಿ ಕೆಲಸದಲ್ಲಿ ಭದ್ರತೆ ಇದೆ. ಆಕರ್ಷಕ ಸಂಬಳ, ಸವಲತ್ತು, ಪಿಂಚಣಿ ಸಿಗುತ್ತದೆ ಎನ್ನುವುದೊಂದೇ ಕಾರಣವಿರಲಿಕ್ಕಿಲ್ಲ. ವಿಧಾನಸಭೆ ಸಚಿವಾಲಯ ರಾಜ್ಯ ರಾಜಕಾರಣದ ಶಕ್ತಿಕೇಂದ್ರವೂ ಆಗಿರುವುದರಿಂದ ಅಲ್ಲಿ ಜವಾನರ ಹುದ್ದೆಗೂ ಒಂದು ತೂಕವಿದೆ ಎನ್ನುವುದಿರಬಹುದೆ?

ನಿರುದ್ಯೋಗದ ಸಮಸ್ಯೆ ಭೀಕರವಾಗಿದೆ ಎನ್ನುವುದು ನಿಜವೇ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಉತ್ತಮ ಸಂಬಳದ ಕೆಲಸವೊಂದನ್ನು ಸಂಪಾದಿಸಲು ಇವತ್ತು ಎಂತಹ ಪ್ರತಿಭಾವಂತರೂ ಕಷ್ಟ ಪಡಲೇಬೇಕು. ಆದರೆ ವಿಶ್ವವಿದ್ಯಾನಿಲಯದಲ್ಲಿ ಪಿಎಚ್‌ಡಿ ಮಾಡಿದವರಿಗೂ, ಸ್ನಾತಕೋತ್ತರ ಪದವಿ ಪಡೆದವರಿಗೂ ವಿಧಾನಸೌಧದ ಜವಾನರ ಹುದ್ದೆ ಇಷ್ಟು ಆಕರ್ಷಕವಾಗಿ ಕಾಣಲು ಕಾರಣಗಳು ಬೇರೆಯೇ ಇರಬಹುದೆ? ಉತ್ತರ ಪ್ರದೇಶದ ವಿಧಾನಸಭೆಯಲ್ಲಿ ಜವಾನರ ಹುದ್ದೆಗೆ ಸುಮಾರು 16 ಸಾವಿರ ರೂಪಾಯಿ ಸಂಬಳವಿದೆ. ಇನ್ನೊಂದಿಷ್ಟು ಸರ್ಕಾರಿ ಸಲವತ್ತುಗಳಿವೆ. ಎಲ್ಲ ಸೇರಿ ತಿಂಗಳಿಗೆ 22 ಸಾವಿರಕ್ಕೆ ಮೋಸವಿಲ್ಲ. ಆದರೆ ಇದಿಷ್ಟೇ ಈ ಕೆಲಸದ ಆಕರ್ಷಣೆ ಎನ್ನಲು ಸಾಧ್ಯವಿಲ್ಲ.

ಇವತ್ತಿನ ರಾಜಕೀಯದಲ್ಲಿ ಭ್ರಷ್ಟಾಚಾರ ಎಷ್ಟೊಂದು ಹಾಸುಹೊಕ್ಕಾಗಿದೆ ಎನ್ನುವುದು ಎಲ್ಲರಿಗೂ ತಿಳಿದದ್ದೇ. ರಾಜ್ಯದ ಶಕ್ತಿಕೇಂದ್ರದಲ್ಲಿ ಸರ್ಕಾರಿ ಕೆಲಸವೆಂದರೆ ಪ್ರತಿನಿತ್ಯ ಸಾಕಷ್ಟು ‘ಮೇಲುಸಂಪಾದನೆ’ ನಡೆಸಲು ಅವಕಾಶವಿದೆ ಎನ್ನುವುದು ಅರ್ಜಿ ಸಲ್ಲಿಸಿದ ಈ ಉನ್ನತ ವಿದ್ಯಾವಂತರ ಲೆಕ್ಕಾಚಾರ ಇರಬಹುದೆ? ಯಾವುದೇ ಕಡತಗಳು ಸೂಕ್ತ ಸಮಯದಲ್ಲಿ ಸೂಕ್ತ ಟೇಬಲ್ಲಿಗೆ ತಲುಪಬೇಕೆಂದರೆ, ಅದರಲ್ಲಿ ಜವಾನನ ಪಾತ್ರ ಅತಿಮುಖ್ಯ ಎನ್ನುವುದು ನಮ್ಮ ಆಡಳಿತ (ಅ)ವ್ಯವಸ್ಥೆಯನ್ನು ಬಲ್ಲವರಿಗೆ ಚೆನ್ನಾಗಿ ಗೊತ್ತಿದೆ. ಪಿಎಚ್‌ಡಿ ಅಥವಾ ಸ್ನಾತಕೋತ್ತರ ಪದವಿಗೆ ತಕ್ಕುದಾದ ಕೆಲಸ ಬೇರೆಡೆ ಸಿಕ್ಕಿದರೂ, ಅದರಲ್ಲಿ ಇಷ್ಟು ಸುಲಭವಾಗಿ ಅತ್ಯಧಿಕ ಸಂಪಾದನೆ ಮಾಡಲು ಆಗುವುದಿಲ್ಲ ಎನ್ನುವುದು ಹೆಚ್ಚಿನ ಅಭ್ಯರ್ಥಿಗಳ ಮನದಿಂಗಿತ ಇದ್ದಂತಿದೆ.

ಇಲ್ಲಿ ಇದಕ್ಕಿಂತ ಗಂಭೀರವಾದ ಸಂಗತಿ ಇನ್ನೊಂದಿದೆ. ಅದು ನಮ್ಮ ಶಿಕ್ಷಣ ವ್ಯವಸ್ಥೆ ಹುಟ್ಟುಹಾಕುತ್ತಿರುವ ಆತ್ಮವಿಶ್ವಾಸದ ಕೊರತೆಯದ್ದು. ಸ್ನಾತಕೋತ್ತರ ಪದವೀಧರರು, ಪಿಎಚ್‌ಡಿ ಮಾಡಿದವರು ಬಹಳ ಬುದ್ಧಿವಂತರೂ, ತಮ್ಮ ಕಲಿಕೆಯ ಬಗ್ಗೆ ಅತ್ಯಂತ ಹೆಚ್ಚು ಆತ್ಮವಿಶ್ವಾಸ ಉಳ್ಳವರೂ ಆಗಿರುತ್ತಾರೆ ಎನ್ನುವುದು ಬಹುತೇಕರ ಭಾವನೆ. ಆದರೆ ಉತ್ತರ ಪ್ರದೇಶದಲ್ಲಿ ಜವಾನರ ಹುದ್ದೆಗೆ ಅರ್ಜಿ ಸಲ್ಲಿಸಿರುವ ಈ ಅಕಾಡೆಮಿಕ್ ಬೃಹಸ್ಪತಿಗಳಲ್ಲಿ ಜ್ಞಾನ ಮತ್ತು ಆತ್ಮವಿಶ್ವಾಸದ ಕೊರತೆ ತೀವ್ರವಾಗಿರುವಂತೆ ಕಾಣುತ್ತಿದೆ. ಬಹುತೇಕರಿಗೆ ತಾವು ಪಡೆದಿರುವ ಉನ್ನತ ಶಿಕ್ಷಣ ಮತ್ತು ಅರ್ಹತೆಯ ಬಗ್ಗೆಯೇ ವಿಶ್ವಾಸ ಇದ್ದಂತಿಲ್ಲ. ಜ್ಞಾನದ ಕೊರತೆಯೂ ಇರುವಂತಿದೆ. ಹೀಗೆ ಸ್ನಾತಕೋತ್ತರ ಪದವಿ ಮತ್ತು ಪಿಎಚ್‌ಡಿ ಪದವಿಗಳನ್ನು ಪಡೆಯಲು ಈ ಅಭ್ಯರ್ಥಿಗಳು ನೇರದಾರಿಯನ್ನು ಬಿಟ್ಟು ಅಡ್ಡಹಾದಿಯನ್ನು ಹಿಡಿದಿರುವುದೇ ಈ ಆತ್ಮವಿಶ್ವಾಸದ ಕೊರತೆಗೆ ಕಾರಣವಾಗಿರಬಹುದೆ? ಬಿಹಾರ ಮತ್ತು ಉತ್ತರ ಪ್ರದೇಶದ ಶೈಕ್ಷಣಿಕ ವಲಯದಲ್ಲಿ ಸಾಮೂಹಿಕ ನಕಲು ಬಹುದೊಡ್ಡ ಸಮಸ್ಯೆ. ನಮ್ಮ ರಾಜ್ಯದಲ್ಲೂ ಕೆಲವು ಜಿಲ್ಲೆಗಳಲ್ಲಿ ಈ ಸಮಸ್ಯೆ ಇರುವುದು ಗೊತ್ತೇ ಇದೆ. ಪರಿಸ್ಥಿತಿ ಹೀಗಾದರೆ, ಉನ್ನತ ಶಿಕ್ಷಣ ಎನ್ನುವುದಕ್ಕೆ ಅರ್ಥವೇನಿದೆ? ಜವಾನರ ಹುದ್ದೆಗೂ ಸ್ನಾತಕೋತ್ತರ ಪದವೀಧರರು ಲಗ್ಗೆ ಹಾಕುವುದಾದರೆ, ಬರೀ ಎಸ್ಸೆಸೆಲ್ಸಿ ಪಾಸಾಗುವಷ್ಟು ಬುದ್ಧಿಸಾಮರ್ಥ್ಯ ಹೊಂದಿರುವ ಅಭ್ಯರ್ಥಿಗಳು ಎಲ್ಲಿಗೆ ಹೋಗಬೇಕು?

■ **ಬಿ.ಎಂ.ಹನೀಫ್**



ಈಶ್ವರ್